# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **1308(1547)** |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ್ ಕುಮಾರ್ ಅರಳಿ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.03.2022 |
| ಉತ್ತರಿಸುವ ಸಚಿವರು | ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ 2021-22ನೇ ಸಾಲಿನಲ್ಲಿ ಆಹಾರ ಸರಬರಾಜು ಟೆಂಡರ್ ನಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ದೂರುಗಳು ಬಂದಿವೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಟೆಂಡರ್ ಬಗ್ಗೆ ತನಿಖೆಗೆ ಆದೇಶಿಸಲಾಗಿದೆಯ; ಇಲ್ಲವಾದಲ್ಲಿ ಕಾರಣಗಳೇನು; | ಬೀದರ್ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ವಸತಿ ನಿಲಯಗಳಿಗೆ ಆಹಾರ ಸಾಮಗ್ರಿ ಸರಬರಾಜು ಮಾಡುವ ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರಕ್ಕೆ ಸಂಬಂಧಿಸಿದ ದೂರಿನ ಹಿನ್ನಲೆಯಲ್ಲಿ, ಪರಿಶೀಲಿಸಿ ವರದಿ ಸಲ್ಲಿಸುವಂತೆ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಕೋರಲಾಗಿತ್ತು. ಸದರಿಯವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದಾಗ ವರದಿಯಲ್ಲಿ ಜಿಲ್ಲಾಧಿಕಾರಿ, ಬೀದರ್ ಜಿಲ್ಲೆಯವರ ವರದಿ, ಟೆಂಡರ್ ಅಧಿಸೂಚನೆಯ ಪ್ರತಿ ಹಾಗೂ ಟೆಂಡರ್ ದಾಖಲೆಗಳು, ತಾಂತ್ರಿಕ ಪರಿಶೀಲನಾ ಸಮಿತಿಯ ನಡವಳಿ ಪ್ರತಿ ಮತ್ತು ಆರ್ಥಿಕ ಬಿಡ್ ಸಮಿತಿಯ ನಡವಳಿ ಪ್ರತಿ ಲಭ್ಯವಿರಲಿಲ್ಲ ಹಾಗೂ ವರದಿ ಅಪೂರ್ಣವಾಗಿತ್ತು. ಆದ್ದರಿಂದ ನೇರವಾಗಿ ದಿನಾಂಕ:08.02.2022 ರಲ್ಲಿ ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ಇವರಿಗೆ ವರದಿ ಹಾಗೂ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿದ್ದು, ಜಿಲ್ಲಾಧಿಕಾರಿ, ಬೀದರ್ ಇವರಿಂದ ಮಾಹಿತಿ ದಿನಾಂಕ:02.03.2022 ರಂದು ಸ್ವೀಕೃತವಾಗಿದ್ದು, ಮಾಹಿತಿ ಪರಿಶೀಲನೆಯ ಹಂತದಲ್ಲಿದೆ. |
| ಇ) | ಆರೋಪ ಬಂದಿದ್ದರೂ ಸರ್ಕಾರ ತನಿಖೆಗೆ ಆದೇಶಿಸಿಲ್ಲವೇಕೇ; ಈ ಅವ್ಯವಹಾರದಲ್ಲಿ ಭಾಗಿಯಾದ ಕಾರಣ ಕರ್ತರು ಯಾರು; | ಅನ್ವಯಿಸುವುದಿಲ್ಲ. |

| | | |
|---|---|---|
| ಈ) | ಈ ಟೆಂಡರ್ ನೀಡುವಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಸಮಿತಿ ಸಭೆ ಜರುಗಿಸಿ ನಿರ್ಧಾರ ಮಾಡಿ ಸರಬರಾಜು ಆದೇಶ ನೀಡಲಾಗಿದೆಯೇ; ಹಾಗೂ ಜಿಲ್ಲಾ ಸಮಿತಿ ಸಭೆ ನಡೆದಿದೆಯೇ? (ಸಭೆಯ ನಡವಳಿಯನ್ನು ನೀಡುವುದು) | ಹೌದು. ದಿನಾಂಕ:14.06.2021 ರಂದು ನಡೆದ ಜಿಲ್ಲಾ ಸಮಿತಿ ಸಭೆಯ ನಡವಳಿಯ ಪ್ರತಿಯನ್ನು **ಅನುಬಂಧ** ದಲ್ಲಿ ನೀಡಲಾಗಿದೆ |

**ಸಂಖ್ಯೆ: ಹಿಂವಕ 187 ಬಿಎಂಎಸ್ 2022**

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ

**ದಿನಾಂಕ: 14-06-2021 ರಂದು 11:00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವಸತಿ ನಿಲಯಗಳಿಗೆ ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆ/ಕಾಲೇಜುಗಳಿಗೆ ಆಹಾರ ಧಾನ್ಯಗಳ ಖರೀದಿ ಸಮಿತಿ ಬೀದರ ಅರ್ಹ ಟೆಂಡರದಾರರಿಗೆ ಸರಬರಾಜು ಆದೇಶ ನೀಡಲು ಸಭೆಯ ನಡವಳಿಗಳು.**

<u>ಹಾಜರಿದ್ದ ಅಧಿಕಾರಿಗಳು,</u>

| | | |
|---|---|---|
| 1. | ಜಿಲ್ಲಾಧಿಕಾರಿಗಳು, ಬೀದರ | ಅಧ್ಯಕ್ಷರು. |
| 2. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ | ಸದಸ್ಯರು. |
| 3. | ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೀದರ | ಸದಸ್ಯರು. |
| 4. | ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ | ಸದಸ್ಯರು. |
| 5. | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಬೀದರ | ಸದಸ್ಯ ಕಾರ್ಯದರ್ಶಿ |

ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೀದರ ಇವರು ಸಮಿತಿ ಅಧ್ಯಕ್ಷರಿಗೆ ಹಾಗೂ ಹಾಜರಿದ್ದ ಸದಸ್ಯರುಗಳಿಗೆ ಸ್ವಾಗತ ಕೋರಿದರು. ದಿನಾಂಕ: 17-04-2021ರಂದು ತಾಲೂಕಾವಾರು ಟೆಂಡರದಾರರ ತಾಂತ್ರಿಕ ಬಿಡ್‌ನ್ನು ತೆರೆದು ದಾಖಲಾತಿಗಳನ್ನು ಪರಿಶೀಲನೆ ಮಾಡಿ ಎಲ್ಲ ದಾಖಲೆಗಳು ಸರಿ ಇದ್ದ ಬಿಡ್‌ದಾರರ ಆರ್ಥಿಕ ಲಕೋಟೆ ತೆರೆಯಲಾಯಿತು ಎಂದು ಸಭೆಗೆ ತಿಳಿಸಿದರು.

1) ಎ.ಪಿ.ಎಂ.ಸಿಯಿಂದ ಪಡೆದ 12 ತಿಂಗಳ ದರಗಳ ಸರಾಸರಿ ತೆಗೆದು, ನಂತರ ಬಿಡ್‌ದಾರರು ಸಲ್ಲಿಸಿರುವ ದರಗಳ ತುಲನಾತ್ಮಕ ಪಟ್ಟಿ ತಯಾರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.
2) ಟೆಂಡರ ಬುಲೆಟಿನ್ ನಿಬಂಧನೆ-(5)ರಲ್ಲಿ ಎ.ಪಿ.ಎಂ.ಸಿ ಸರಾಸರಿ ದರಕ್ಕಿಂತ ಶೇ15% ಕ್ಕಿಂತ ಹೆಚ್ಚು ಅಥವಾ ಕಡಿಮೆ ಇರುವ ದರಗಳನ್ನು ಫ್ರೀಕ್ ದರಗಳು (Abnormal Rates/Freak Rates) ಎಂದು ಪರಿಗಣಿಸಲಾಗುವುದು ಹಾಗೂ ಅಂತಹ ಬಿಡ್ಡದಾರರನ್ನು ತಿರಸ್ಕರಿಸಲಾಗುವುದು ಎಂದು ಸಭೆಗೆ ತಿಳಿಸಿದರು.
3) ಒಂದು ವೇಳೆ ಎಲ್ಲ ಬಿಡ್‌ದಾರರು ಫ್ರೀಕ್ ದರಗಳನ್ನು ಹೊಂದಿದ್ದರೆ ಕಡಿಮೆ ಫ್ರೀಕ್ ದರಗಳು ಹಾಗೂ ಕಡಿಮೆ ದರವನ್ನು ತಾಳೆ ಹಾಕಿ L-1 ನಿರ್ಧರಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿ ಇದರಲ್ಲಿ ಸಮಿತಿಯ ತೀರ್ಮಾನವೇ ಅಂತಿಮ ಎಂದು ಸಭೆಗೆ ತಿಳಿಸಿದರು
4) ತಾಲೂಕಾವಾರು ಬಿಡ್‌ದಾರರು ಸಲ್ಲಿಸಿರುವ ದರಗಳಲ್ಲಿ ಫ್ರೀಕ್ ದರ ನಮೂದಿಸಿರುವ ಸಾಮಗ್ರಿಗಳ ಲೆಕ್ಕ ಹಾಕಿ 05 ಕ್ಕಿಂತ ಹೆಚ್ಚು ಫ್ರೀಕ್ (Freak) ದರ ನಮೂದಿಸಿರುವ ಬಿಡ್‌ದಾರರನ್ನು ತಿರಸ್ಕರಿಸಿ 05 ರ ಒಳಗಡೆ ಫ್ರೀಕ್ (Freak) ದರ ನಮೂದಿಸಿರುವ ಬಿಡ್‌ದಾರರಲ್ಲಿ ಕಡಿಮೆ ಮೊತ್ತ ಇರುವ ಬಿಡ್‌ದಾರರನ್ನು L-1 ಎಂದು ಪರಿಗಣಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಈ ಬಗ್ಗೆ ಸಮಿತಿಯಲ್ಲಿ ಸವಿಸ್ತಾರವಾಗಿ ಚರ್ಚಿಸಿ ಕ್ರ.ಸಂಖ್ಯೆ (1) ರಿಂದ (4) ರ ವರೆಗಿನ ನಿಯಮಗಳಂತೆ ಕ್ರಮವಹಿಸಲು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಅದರಂತೆ ತಾಲ್ಲೂಕಾವಾರು ವಿವರ ಈ ಕೆಳಗಿನಂತೆ ಇದ್ದು **L-1** ಬಿಡ್‌ದಾರರಿಗೆ ಕಾರ್ಯಾದೇಶ ನೀಡಲು ಸಹ ತೀರ್ಮಾನಿಸಲಾಯಿತು.

## 1) ಔರಾದ ತಾಲೂಕು / Aurad Taluka

| ಕ್ರ ಸಂ | ಟೆಂಡರದಾರರ ಹೆಸರು | ಬಿಡ್‌ದಾರರ ಒಟ್ಟು ಮೊತ್ತ | ಫ್ರೀಕ್ ದರಗಳು ನಮೂದಿಸಿದ ಸಂಖ್ಯೆ | ಷರಾ |
|---|---|---|---|---|
| 1. | SUPRIYA KAJI ( BLOOMUN SALES ) | 27084.00 | 19 | ತಿರಸ್ಕರಿಸಲಾಗಿದೆ. |
| 2. | RONAD IBRAHIMSAB ( RONAD TRADERS ) | 23720.95 | 1 | L-5 |
| 3. | SHAMRAO ARALI SURYAKANTH KARNATAKA CO-OPT CONSUMERS FEDERATION LTD | 13553.75 | 26 | ತಿರಸ್ಕರಿಸಲಾಗಿದೆ. |
| 4. | GURU BASAVA TRADERS COMMISSION AGENT AND GENERAL MERCHANT | 23373.60 | 3 | L-1 |
| 5. | THE BANGALORE NORTH TALUK AGREECULTURE PRODUCES CO-OP MARKETING SOCIETY LIMITED | 23565.77 | 2 | L-4 |
| 6. | ASHOK HEBBALE TRADING CMPANY BIDAR | 23545.80 | 1 | L-3 |
| 7 | CHANDRASHEKAR HEBBALE BASWESHWAR ENTERPRISES BIDAR | 23544.24 | 1 | L-2 |
| 8. | VISHWANATH B PATIL SHIVASHAKTI DALL INDUSTRIES | 12838.03 | 40 | ತಿರಸ್ಕರಿಸಲಾಗಿದೆ. |
| 9 | BAILAHONGALA TQ AGRICULTURAL PRODUCE CO-OP MARKETING SOCIETY LTD | 6629.00 | 54 | ತಿರಸ್ಕರಿಸಲಾಗಿದೆ. |

ಮೇಲಿನ ಔರಾದ ತಾಲೂಕಿನಲ್ಲಿ ಒಟ್ಟು 09 ಬಿಡ್‌ದಾರರ ಆರ್ಥಿಕ ಲಕೋಟೆ ತೆರೆದ ನಂತರ ತುಲನಾತ್ಮಕ ಪಟ್ಟಿಯಲ್ಲಿ ನಿಬಂಧನೆ (5)ರ ಪ್ರಕಾರ ಕ್ರ.ಸಂ: (1),(3),(8) ಮತ್ತು (9)ರ ಬಿಡ್‌ದಾರರು 5ಕ್ಕಿಂತ ಹೆಚ್ಚಿನ ಸಾಮಗ್ರಿಗಳಿಗೆ ಫ್ರೀಕ್ ದರಗಳನ್ನು ನಮೂದಿಸಿರುವದರಿಂದ, ತಿರಸ್ಕರಿಸಿ ಉಳಿದ ಅರ್ಹ ಬಿಡ್‌ದಾರರಲ್ಲಿ ಕ್ರ.ಸಂ:,(4)ರಲ್ಲಿರುವ ಮೇ: **GURU BASAVA TRADERS COMMISSION AGENT AND GENERAL MERCHANT BIDAR** ಇವರು ನಮೂದಿಸಿದ ದರಗಳು L-1 ಆಗಿರುವುದರಿಂದ ಸದರಿಯವರಿಗೆ ಕಾರ್ಯ ಆದೇಶ ನೀಡಲು ತೀರ್ಮಾನಿಸಲಾಯಿತು.

## 2) ಭಾಲ್ಕಿ ತಾಲೂಕು / Bhalki Taluka

| ಕ್ರ ಸಂ | ಟೆಂಡರದಾರರ ಹೆಸರು | ಬಿಡ್‌ದಾರರ ಒಟ್ಟು ಮೊತ್ತ | ಫ್ರೀಕ್ ದರಗಳು ನಮೂದಿಸಿದ ಸಂಖ್ಯೆ | ಷರಾ |
|---|---|---|---|---|
| 1. | **CHANDRASHEKAR HEBBALE (BASWESHWAR ENTERPRISES** | **23544.17** | **0** | **L-1** |
| 2. | SUPRIYA KAJI ( BLOOMUN SALES | 25034.10 | 24 | ತಿರಸ್ಕರಿಸಲಾಗಿದೆ. |
| 3. | SHAMRAO ARALI SURYAKANTH KARNATAKA CO-OPT CONSUMERS FEDERATION LTD | 13553.75 | 37 | ತಿರಸ್ಕರಿಸಲಾಗಿದೆ. |
| 4. | PRAKASH GOWDAPPANORE GURU BASAVA TRADERS COMMISSION AGENT AND GENERAL MERCHANT | 21867.50 | 55 | ತಿರಸ್ಕರಿಸಲಾಗಿದೆ. |
| 5. | VISHWANATH B PATIL SHIVASHAKTI DALL INDUSTRIES | 12836.51 | 42 | ತಿರಸ್ಕರಿಸಲಾಗಿದೆ. |
| 6. | C N BHAGYALAKSHMI THE BANGALORE NORTH TALUK AGREECULTURE PRODUCES CO-OP MARKETING SOCIETY LIMITED ) | 23793.32 | 2 | L-3 |
| 7. | ASHOK HEBBALE (ASHOK HEBBALE TRADING CMPANY | 23544.48 | 1 | L-2 |
| 8. | SHARAN REDDY NAVEEN TRADERS | 8607.50 | 59 | ತಿರಸ್ಕರಿಸಲಾಗಿದೆ. |
| 9. | VISHWANATHAREDDY S D NIRMALA DEVI MAHILA MANDAL | 18904.10 | 34 | ತಿರಸ್ಕರಿಸಲಾಗಿದೆ. |

ಮೇಲಿನ ಭಾಲ್ಕಿ ತಾಲೂಕಿನಲ್ಲಿ ಒಟ್ಟು 09 ಬಿಡ್‌ದಾರರ ಆರ್ಥಿಕ ಲಕೋಟೆ ತೆರೆದ ನಂತರ ತುಲನಾತ್ಮಕ ಪಟ್ಟಿಯಲ್ಲಿ ನಿಬಂಧನೆ (5)ರ ಪ್ರಕಾರ ಕ್ರ.ಸಂ: (2),(3),(4) (5), (8) ಮತ್ತು (9)ರ ಬಿಡ್‌ದಾರರು 5ಕ್ಕಿಂತ ಹೆಚ್ಚಿನ ಫ್ರೀಕ್ ದರಗಳನ್ನು ನಮೂದಿಸಿರುವದರಿಂದ, ತಿರಸ್ಕರಿಸಿ ಉಳಿದ ಅರ್ಹ ಬಿಡ್‌ದಾರರಲ್ಲಿ ಕ್ರ.ಸಂ:(1) ಮೇ: **CHANDRASHEKAR HEBBALE BASWESHWAR ENTERPRISES BIDAR** ಇವರು ನಮೂದಿಸಿದ ದರಗಳು L-1 ಆಗಿರುವುದರಿಂದ ಸದರಿಯವರಿಗೆ ಕಾರ್ಯ ಆದೇಶ ನೀಡಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು.

## 3) ಬಸವಕಲ್ಯಾಣ ತಾಲೂಕು / Basavaklayan Taluka

| ಕ್ರ ಸಂ | ಟೆಂಡರದಾರರ ಹೆಸರು | ಬಿಡ್‌ದಾರರ ಒಟ್ಟು ಮೊತ್ತ | ಫ್ರೀಕ್ ದರಗಳು ನಮೂದಿಸಿದ ಸಂಖ್ಯೆ | ಷರಾ |
|---|---|---|---|---|
| 1. | CHANDRASHEKAR HEBBALE (BASWESHWAR ENTERPRISES | 23544.24 | 2 | L-2 |
| 2. | SUPRIYA KAJI BLOOMUN SALES | 25719.25 | 22 | ತಿರಸ್ಕರಿಸಲಾಗಿದೆ. |
| 3. | RONAD IBRAHIMSAB (RONAD TRADERS) | 23720.95 | 2 | L-3 |
| 4. | SHAMRAO ARALI SURYAKANTH ( KARNATAKA CO-OPT CONSUMERS FEDERATION LTD | 13553.75 | 36 | ತಿರಸ್ಕರಿಸಲಾಗಿದೆ. |
| 5. | PRAKASH GOWDAPPANORE ( GURU BASAVA TRADERS COMMISSION AGENT AND GENERAL MERCHANT ) | 24100.15 | 2 | L-5 |
| 6. | C N BHAGYALAKSHMI (THE BANGALORE NORTH TALUK AGREECULTURE PRODUCES CO-OP. MARKETING SOCIETY LIMITED ) | 23793.32 | 4 | L-4 |
| 7. | **ASHOK HEBBALE** (ASHOK HEBBALE TRADING CMPANY ) | 23544.17 | 3 | L-1 |
| 8. | VISHWANATH B PATIL ( SHIVASHAKTI DALL INDUSTRIES ) | 12837.51 | 45 | ತಿರಸ್ಕರಿಸಲಾಗಿದೆ. |
| 9. | SHIDLINGAPPA BARIGIDAD (BAILAHONGALA TQ AGRICULTURAL PRODUCE CO-OP MARKETING SOCIETY LTD) | 6636.00 | 53 | ತಿರಸ್ಕರಿಸಲಾಗಿದೆ. |
| 10. | SHARAN REDDY ( NAVEEN TRADERS ) | 8607.50 | 64 | ತಿರಸ್ಕರಿಸಲಾಗಿದೆ. |
| 11. | VISHWANATHAREDDY S D (NIRMALA DEVI MAHILA MANDAL ) | 18904.10 | 37 | ತಿರಸ್ಕರಿಸಲಾಗಿದೆ. |

ಮೇಲಿನ ಬಸವಕಲ್ಯಾಣ ತಾಲೂಕಿನಲ್ಲಿ ಒಟ್ಟು:- 11 ಬಿಡ್‌ದಾರರ ಆರ್ಥಿಕ ಲಕೋಟೆ ತೆರೆದ ನಂತರ ತುಲನಾತ್ಮಕ ಪಟ್ಟಿಯಲ್ಲಿ ನಿಬಂಧನೆ (5)ರ ಪ್ರಕಾರ ಕ್ರ.ಸಂ: (2),(4),(8) (9), (10) ಮತ್ತು (11)ರ ಬಿಡ್‌ದಾರರು 5ಕ್ಕಿಂತ ಹೆಚ್ಚಿಗೆ ಫ್ರೀಕ್ ದರಗಳನ್ನು ನಮೂದಿಸಿರುವದರಿಂದ ತಿರಸ್ಕರಿಸಿ ಉಳಿದ ಅರ್ಹ ಬಿಡ್‌ದಾರರಲ್ಲಿ ಕ್ರ.ಸಂ:(7)ರಲ್ಲಿ ಮೇ: **ASHOK HEBBALE TRADING CMPANY BIDAR** ಇವರು ನಮೂದಿಸಿದ ದರಗಳು L-1 ಆಗಿರುವುದರಿಂದ ಸದರಿಯವರಿಗೆ ಕಾರ್ಯ ಆದೇಶ ನೀಡಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು.

## 4) ಬೀದರ ತಾಲೂಕಾ / Bidar Taluka

| ಕ್ರ. ಸಂ. | ಟೆಂಡರದಾರರ ಹೆಸರು | ಬಿಡ್‌ದಾರರ ಒಟ್ಟು ಮೊತ್ತ | ಫ್ರೀಕ್ ದರಗಳು ನಮೂದಿಸಿದ ಸಂಖ್ಯೆ | ಷರಾ |
|---|---|---|---|---|
| 1. | **CHANDRASHEKAR HEBBALE BASWESHWAR ENTERPRISES** | 23544.17 | 0 | L-1 |
| 2. | SUPRIYA KAJI ( BLOOMUN SALES ) | 23976.75 | 24 | ತಿರಸ್ಕರಿಸಲಾಗಿದೆ. |
| 3. | Ronad Ibrahimsab ( RONAD TRADERS ) | 23720.95 | 1 | L-5 |
| 4. | SHAMRAO ARALI SURYAKANTH ( KARNATAKA CO-OPT CONSUMERS FEDERATION LTD | 13553.75 | 37 | ತಿರಸ್ಕರಿಸಲಾಗಿದೆ. |
| 5. | PRAKASH GOWDAPPANORE ( GURU BASAVA TRADERS COMMISSION AGENT AND GENERAL MERCHANT ) | 23679.75 | 3 | L-4 |
| 6. | C N Bhagyalakshmi ( THE BANGALORE NORTH TALUK AGREECULTURE PRODUCES CO-OP MARKETING SOCIETY LIMITED ) | 23565.77 | 2 | L-3 |
| 7. | ASHOK HEBBALE ( ASHOK HEBBALE TRADING CMPANY ) | 23544.17 | 1 | L-2 |
| 8. | VISHWANATH B PATIL ( SHIVASHAKTI DALL INDUSTRIES ) | 12837.51 | 41 | ತಿರಸ್ಕರಿಸಲಾಗಿದೆ. |
| 9. | SHARAN REDDY ( NAVEEN TRADERS ) | 8607.50 | 60 | ತಿರಸ್ಕರಿಸಲಾಗಿದೆ. |
| 10. | VISHWANATHAREDDY S D ( NIRMALA DEVI MAHILA MANDAL ) | 18904.10 | 35 | ತಿರಸ್ಕರಿಸಲಾಗಿದೆ. |

ಮೇಲಿನ ಬೀದರ ತಾಲೂಕಿನಲ್ಲಿ ಒಟ್ಟು: 10 ಬಿಡ್‌ದಾರರ ಆರ್ಥಿಕ ಲಕೋಟೆ ತೆರೆದ ನಂತರ ತುಲನಾತ್ಮಕ ಪಟ್ಟಿಯಲ್ಲಿ ನಿಬಂಧನೆ (5)ರ ಪ್ರಕಾರ ಕ್ರ.ಸಂ: (2),(4),(8) (9), (10) ಮತ್ತು (11)ರ ಬಿಡ್‌ದಾರರು 5ಕ್ಕಿಂತ ಹೆಚ್ಚಿಗೆ ಫ್ರೀಕ್ ರೇಟ್ ನಮೂದಿಸಿರುವದರಿಂದ ತಿರಸ್ಕರಿಸಿ ಉಳಿದ ಅರ್ಹ ಬಿಡ್‌ದಾರರಲ್ಲಿ ಕ್ರ.ಸಂ: (1) **BASWESHWAR ENTERPRISES BIDAR** ಇವರು ನಮೂದಿಸಿದ ದರಗಳು L-1 ಆಗಿರುವುದರಿಂದ ಸದರಿಯವರಿಗೆ ಕಾರ್ಯ ಆದೇಶ ನೀಡಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು.

## 5) ಹುಮನಾಬಾದ / HUMNABAD TALUKA

| ಕ್ರ. ಸಂ | ಟೆಂಡರದಾರರ ಹೆಸರು | ಬಿಡ್‌ದಾರರ ಒಟ್ಟು ಮೊತ್ತ | ಫ್ರೀಕ್ ದರಗಳು ನಮೂದಿಸಿದ ಸಂಖ್ಯೆ | ಷರಾ |
|---|---|---|---|---|
| 1. | SUPRIYA KAJI BLOOMUN SALES | 24693.00 | 22 | ತಿರಸ್ಕರಿಸಲಾಗಿದೆ. |
| 2. | **CHANDRASHEKAR HEBBALE BASWESHWAR ENTERPRISES** | 23544.17 | 2 | L-1 |
| 3. | SHAMRAO ARALI SURYAKANTH (KARNATAKA CO-OPT CONSUMERS FEDERATION LTD | 13553.25 | 33 | ತಿರಸ್ಕರಿಸಲಾಗಿದೆ. |
| 4 | PRAKASH GOWDAPPANORE GURU BASAVA TRADERS COMMISSION AGENT AND GENERAL MERCHANT | 21163.00 | 6 | ತಿರಸ್ಕರಿಸಲಾಗಿದೆ. |
| 5. | VISHWANATH B PATIL SHIVASHAKTI DALL INDUSTRIES | 12837.51 | 41 | ತಿರಸ್ಕರಿಸಲಾಗಿದೆ. |
| 6. | C N Bhagyalakshmi ( THE BANGALORE NORTH TALUK AGREECULTURE PRODUCES CO-OP MARKETING SOCIETY LIMITED ) | 23793.32 | 2 | L-3 |
| 7. | ASHOK HEBBALE ( ASHOK HEBBALE TRADING CMPANY ) | 23544.48 | 3 | L-2 |
| 8. | SHIDLINGAPPA BARIGIDAD BAILAHONGALA TQ AGRICULTURAL PRODUCE CO-OP MARKETING SOCIETY LTD | 6636..00 | 54 | ತಿರಸ್ಕರಿಸಲಾಗಿದೆ. |

ಮೇಲಿನ ಹುಮನಾಬಾದ ತಾಲೂಕಿನಲ್ಲಿ ಒಟ್ಟು 08 ಬಿಡ್‌ದಾರರ ಆರ್ಥಿಕ ಲಕೋಟೆ ತೆರೆದ ನಂತರ ತುಲನಾತ್ಮಕ ಪಟ್ಟಿಯಲ್ಲಿ ನಿಬಂಧನೆ (5)ರ ಪ್ರಕಾರ ಕ್ರ.ಸಂ: (1),(3),(4),(5)ಮತ್ತು (8)ರವರು ಬಿಡ್‌ದಾರರು 5ಕ್ಕಿಂತ ಹೆಚ್ಚಿಗೆ ಫ್ರೀಕ್ ದರಗಳನ್ನು ನಮೂದಿಸಿರುವದರಿಂದ ತಿರಸ್ಕರಿಸಿ ಉಳಿದ ಅರ್ಹ ಬಿಡ್‌ದಾರರಲ್ಲಿ ಕ್ರ.ಸಂ: (2) ರಲ್ಲಿರುವ ಮೇ: **BASWESHWAR ENTERPRISES BIDAR** ಇವರ ದರಗಳು L-1 ಆಗಿರುವುದರಿಂದ ಸದರಿಯವರಿಗೆ ಕಾರ್ಯ ಆದೇಶ ನೀಡಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು ಕಾರ್ಯಾದೇಶ ಪಡೆಯಲಿರುವ ಬಿಡ್‌ದಾರು ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಮಯದಲ್ಲಿ, ಪ್ರತಿ 6 ತಿಂಗಳಿಗೆ ಒಂದು ಸಲ ಆಹಾರ ಸಾಮಗ್ರಿಗಳ / ಆಹಾರ ಧಾನ್ಯಗಳನ್ನು ಸ್ಯಾಂಪಲ್ ಟೆಸ್ಟಿಂಗ್‌ಗಾಗಿ ಅಂಕಿತ ಅಧಿಕಾರಿಗಳು ಆಹಾರ ಸುರಕ್ಷಿತ ಗುಣಮಟ್ಟ ಪ್ರಾಧಿಕಾರ ಬೀದರ ಇವರ ಮುಖಾಂತರ ವಿಭಾಗಿಯ ಆಹಾರ

ಪ್ರಯೋಗಾಲಯ ಕಲಬುರಗಿ ಇವರಿಂದ ಪರಿಶೀಲನಾ ವರದಿಯ ಪಡೆದು ಧೃಢೀಕರಣದೊಂದಿಗೆ ನೀಡುವಂತೆ ಸೂಚಿಸಿ, 2021-22ನೇ ಸಾಲಿಗೆ ಆಹಾರ ಧಾನ್ಯ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಆದೇಶ ನೀಡುವಂತೆ ಅಂತಿಮವಾಗಿ ಸರ್ವಾನುಮತದಿಂದ ಸಮಿತಿಯಲ್ಲಿ ತಿರ್ಮಾನಿಸಲಾಯಿತು. ಎಲ್ಲಾ ತಾಲೂಕಿನ ಅರ್ಹ L-1 ಬಿಡ್‌ದಾರರಿಗೆ ಸರಬರಾಜು ಆದೇಶವನ್ನು ಟೆಂಡರ್ ದಸ್ತಾವೇಜಿನಲ್ಲಿರುವಂತೆ **ಸೂಕ್ತ ನಿಭಂದನೆ ಹಾಗೂ ಷರತ್ತುಗಳನ್ನು (ಅವಶ್ಯಕವೆನಿಸಿದಲ್ಲಿ ಇನ್ನೂ ಹೆಚ್ಚಿನ ಷರತ್ತುಗಳನ್ನು) ನಮೂದಿಸಿ** ಕರಡು ಆದೇಶದೊಂದಿಗೆ ಕಡತದಲ್ಲಿ ಮಾನ್ಯ ಅಧ್ಯಕ್ಷರ ಅನುಮೊದನೆಗಾಗಿ ಸಲ್ಲಿಸುವಂತೆ ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | | | | |
|---|---|---|---|---|
| ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು | ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಬೀದರ್ ಹಾಗೂ ಸದಸ್ಯರು | ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬೀದರ್ ಹಾಗೂ ಸದಸ್ಯರು | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೀದರ್ ಹಾಗೂ ಸದಸ್ಯರು | ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್ ಹಾಗೂ ಅಧ್ಯಕ್ಷರು, |